# ಹಿಮಾಲಯದ ಹಳ್ಳಿಗೆ ಚಳಿಗಾಲದ ಚಾರಣ



ಕಳೆದ ಐದು ವರ್ಷಗಳಲ್ಲೇ ಅತ್ಯಧಿಕ ಎಂಬಂತೆ ಬಿದ್ದ ಹಿಮದ ಮಳೆಯ ನಡುವೆಯೂ ನಮ್ಮ ಗಟ್ಟಿ ಗುಂಡಿಗೆಯ ಪ್ರವಾಸ ಸ್ವರ್ಗ ಸದೃಶ ಯಂಗ್ತಾಂಗ್‌ನ ವಿವಿಧ ಮುಖಗಳನ್ನು ಪರಿಚಯಿಸಿತು. ಭೂಪಟದಲ್ಲಿ ಹುಡುಕಿದರೂ ಸಿಗದ ಪುಟ್ಟ ಹಳ್ಳಿಯಿದು!

■ ಚಿತ್ರ– ಲೇಖನ: **ನೆಂಪು ಗುರು**

**ಭಾ**ರತದ ಉತ್ತರಕ್ಕೆ ಹಿಮಾಲಯ ಸರಣಿಯಲ್ಲಿ, ಚೀನಾ ಮತ್ತು ಪಾಕಿಸ್ತಾನಕ್ಕೆ ಹೊಂದಿಕೊಂಡಂತೆ ಇರುವ ಲೇಹ್– ಲಡಾಖ್ ಹಲವು ಅಚ್ಚರಿಗಳ, ಅತ್ಯಂತ ಸುಂದರ ತಾಣ. ಚಾರಣಿಗರಿಗೆ, ಬೈಕ್ ಕಾರಿನಲ್ಲಿ ದೀರ್ಘ ಪ್ರಯಾಣ ಹೋಗುವವರಿಗೂ, ಪ್ರವಾಸಕ್ಕೆ ಎಂದೇ ಹೋಗುವವರಿಗೂ ಇಲ್ಲಿ ಹಲವಾರು ಅವಕಾಶಗಳಿವೆ. ಚಳಿಗಾಲದಲ್ಲಿ ಈ ಪ್ರದೇಶ ಹಿಮದ ಹೊದಿಕೆ ಹೊದ್ದು ಮಲಗಿಬಿಡುತ್ತದೆ.

ಹಿಮಪಾತ, ದಟ್ಟ ಹಿಮದಿಂದ ಲೇಹ್‌ಗೆ ಹೋಗುವ ಎಲ್ಲಾ ಮಾರ್ಗಗಳು ಮುಚ್ಚಲ್ಪಟ್ಟು ಕೇವಲ ಆಕಾಶ ಮಾರ್ಗವಾಗಿ ಮಾತ್ರ ತಲುಪಬಹುದು, ಅದೂ ಹವಾಮಾನ ಸರಿಯಾಗಿದ್ದರೆ ಮಾತ್ರ. ಹೆಚ್ಚಾಗಿ ಬೆಳಗ್ಗಿನ ಹೊತ್ತು ವಿಮಾನ ಹಾರಾಟ ಇರುತ್ತದೆ. ಹವಾಮಾನ ಬಿಗಡಾಯಿಸಿ ವಿಮಾನಯಾನ ರದ್ದಾದರೆ ಮತ್ತೆ ಮರುದಿನ ಬೆಳಗ್ಗಿನವರೆಗೆ ಕಾಯುವುದು ಅನಿವಾರ್ಯ.

ಚಳಿಗಾಲದಲ್ಲಿ ಲೇಹ್– ಲಡಾಕಿಗೆ ಹೋಗುವವರು ಹೆಚ್ಚಾಗಿ ಚಾರಣಿಗರು. 7–8 ದಿನಗಳ ಕಾಲ ಇಲ್ಲಿನ ಹೆಪ್ಪುಗಟ್ಟಿದ ಜಂಸ್ಕಾರ್ ನದಿಯ ಮೇಲೆ, ಚಳಿಯನ್ನು ತಡೆದುಕೊಂಡು ನಡೆದುಕೊಂಡು ಹೋಗಬೇಕು. ರಾತ್ರಿ ವಾಸ ನದಿ ತೀರಕ್ಕೆ ಹತ್ತಿರದ ಟೆಂಟ್ ಮತ್ತು ಸ್ಲೀಪಿಂಗ್ ಬ್ಯಾಗ್‌ನಲ್ಲಿ.

ನಮ್ಮದು ಇದಕ್ಕಿಂತ ಭಿನ್ನವಾದ ಚಾರಣ, ಲೇಹ್ ಸುತ್ತಮುತ್ತಲಿನ ಪ್ರದೇಶಗಳಿಗೆ ಭೇಟಿ, ಹಿಮಕಟ್ಟಿದ ಪೇಂಗಾಂಗ್ ಸರೋವರ ಇನ್ನಿತರ ಪ್ರದೇಶಗಳನ್ನು ವೀಕ್ಷಿಸುವ 8 ದಿನಗಳ ಪ್ರವಾಸ. ನಾವು 5 ಜನ ಲೇಹ್